ದಿನಾಂಕಃ 04-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಿಂದ</u>

ನನ್ನ ತಂದೆ ಬಿನ್ ಶೆತ್ಕಿಯಾದ 1 ಎಕರೆ 26 ಗುಂಟೆ ಜಮೀನಿನ ಪೈಕಿ 13.5 ಗುಂಟೆ ಜಮೀನಿನಲ್ಲಿ ನಾವು 3 ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗದಲ್ಲಿ ನನ್ನ ಪಾಲಿಗೆ 2½ ಗುಂಟೆ ಜಮೀನು, ನನ್ನ ಸಹೋದರ ಶ್ರೀನಿವಾಸನಿಗೆ 4 ಗುಂಟೆ ಜಮೀನು ಹಾಗೂ ಇನ್ನೊಬ್ಬ ಸಹೋದರ ಕೃಷ್ಣರವರಿಗೆ 7 ಗುಂಟೆ ಜಮೀನು ಬಂದಿರುತ್ತದೆ. ಸದರಿ 1 ಎಕರೆ 26 ಗುಂಟೆ ಜಮೀನು ಸಿಂಧನೂರು-ಸಿರಗುಪ್ಪ ಮುಖ್ಯ ರಸ್ತೆಯಿಂದ ದಕ್ಷಿಣಕ್ಕೆ 36 ನೇ ಉಪಕಾಲುವೆವರೆಗೆ ಬರುತ್ತದೆ ಎಂದರೆ ಸರಿ ಅಲ್ಲ. ನನ್ನ ತಂದೆ ಖರೀದಿಸಿದ ಜಮೀನಿನ ಖರೀದಿ ಪತ್ರದಲ್ಲಿ ಜಮೀನಿನ ಉತ್ತರಕ್ಕೆ ಇವಿಕೆ ರಂಗಾರಾವ್ ರವರ ಆಸ್ತಿ ಎಂದು ನಮೂದಿಸಲಾಗಿರುತ್ತದೆ. ನನ್ನ ತಂದೆ ಖರೀದಿಸಿದ ಜಮೀನಿನ ಖರೀದಿ ಪತ್ರ ನನ್ನ ಹತ್ತಿರ ಇರುತ್ತದೆ ದಾವಾ ಸಂಖ್ಯೆ233/2015 ರಲ್ಲಿ 13 ½ ಗುಂಟೆ ಜಮೀನಿನ ಉತ್ತರಕ್ಕೆ ಸಿಂಧನೂರು-ಬಳ್ಳಾರಿ ರಸ್ತೆ ಇದೆ ಎಂದು ತೋರಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಉತ್ತರಕ್ಕೆ ಸರ್ವೇ ನಂ.61 ಇದೆ ಎಂದು ಬರೆಸಿಲ್ಲ ಎಂದರೆ ಸರಿ.

ಸಾಕ್ಷಿಗೆ ಭಾವಚಿತ್ರ ತೋರಿಸಲಾಗಿ ಅದರಲ್ಲಿ ಇರುವ ವ್ಯಕ್ತಿಗಳು ತನ್ನ ಹೆಂಡತಿ ಮತ್ತು ಮಗಳು ಎಂದು ಒಪ್ಪಿಕೊಂಡ ಕಾರಣ ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿರುವ ಬಸ್ ಸಿಂಧನೂರು-ಸಿರಗುಪ್ಪ ಮುಖ್ಯ ರಸ್ತೆಯಲ್ಲಿ ನಿಂತಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಸರ್ವೇ ನಂ.61 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರದಲ್ಲಿ ನನ್ನ ಹೆಂಡತಿ ಮತ್ತು ಮಗಳು ಇರುವ ಜಾಗೆಯಲ್ಲಿ ನಾವು ಕಟ್ಟಡ ಕಟ್ಟುತ್ತಿದ್ದೇವೆ ಎಂದರೆ ಸರಿ. ನನ್ನ ಹೆಂಡತಿ ಮಕ್ಕಳು ನಿಂತಿರುವ ಜಾಗೆಯ ಪಶ್ಚಿಮ ದಿಕ್ಕಿಗೆ ನನ್ನ ಹಳೆ ಮನೆ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮನೆ ಸರ್ವೇ ನಂ.58 ರಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ಇನ್ನೊಂದು ಭಾವಚಿತ್ರ ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಇರುವ ಸಿಂಧನೂರು ಬಳ್ಳಾರಿ ರಸ್ತೆಯ ಉತ್ತರಕ್ಕೆ ಇರುವ ಬಿಳಿ ಬಣ್ಣದ ಮನೆ ಜಿ.ಬ್ರಹ್ಮಮ್ ರವರಿಗೆ ಸೇರಿದ್ದು ಎಂದು ಒಪ್ಪಿಕೊಂಡ ಕಾರಣ ಅದನ್ನು ನಿಪಿ-23 ಎಂದು ಗುರುತಿಸಲಾಯಿತು. ಸದರಿ ಸಿಂಧನೂರು-ಬಳ್ಳಾರಿ ರಸ್ತೆಯ ದಕ್ಷಿಣಕ್ಕೆ ನಾನು ಕಟ್ಟಿಸಿದ ಹೊಸ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು

ಅದು ಸರ್ವೇ ನಂ.61 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ-23 ರಲ್ಲಿ ಗಿಡ ಇರುವ ಜಾಗೆಯಲ್ಲಿ ನಾವು ಮನೆ ಕಟ್ಟಿಕೊಂಡು ವಾಸವಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮನೆ ಸರ್ವೇ ನಂ.58 ರಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-23 ರ ಭಾವಚಿತ್ರದಲ್ಲಿ ನನ್ನ ಹಳೆ ಮನೆಯಿಂದ ಮುಖ್ಯ ರಸ್ತೆಯವರೆಗೆ ನಾವು ಅಡ್ಡಾಡಲು ರಸ್ತೆ ಮಾಡಿಕೊಂಡಿರುತ್ತೇವೆ. ನನ್ನ ಪ್ರತಿವಾದ ಪತ್ರದಲ್ಲಿ ಸರ್ವೇ ನಂ.61 ಬಳ್ಳಾರಿ ರಸ್ತೆಯ ದಕ್ಷಿಣ ದಿಕ್ಕಿಗೆ ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಪಾಲು ವಿಭಾಗದಲ್ಲಿ ನನ್ನ ಪಾಲಿಗೆ ಪಶ್ಚಿಮ ದಿಕ್ಕಿನ ಜಮೀನು, ನನ್ನ ಸಹೋದರ ಕೃಷ್ಣರವರಿಗೆ ಪೂರ್ವ ಭಾಗದ ಜಮೀನು ಹಾಗೂ ಶ್ರೀನಿವಾಸ ರವರಿಗೆ ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿಗೆ ಹಂಚಿಕೆಯಾಗಿರುತ್ತದೆ. ವಾದಿ ತನ್ನ ಮನೆಗೆ ಹೋಗಲು ಸರ್ವೇ ನಂ.58 ರಲ್ಲಿರುವ ರಸ್ತೆಯನ್ನು ಬಳಸುತ್ತಾನೆ. ಸರ್ವೇ ನಂ.58 ಮತ್ತು 60 ನ್ನು ಸರ್ವೇ ಇಲಾಖೆಯಿಂದ ಅಳತೆ ಮಾಡಿಸಿರುವುದಿಲ್ಲ. ನಿಪಿ-23 ರಲ್ಲಿ ಕಾಣಿಸುವ ನನ್ನ ಮನೆಯಿಂದ ಪಿಲ್ಲರ್ ಹಾಕಿದ ಜಾಗೆಯ ಮುಖಾಂತರ ರಸ್ತೆ ಇರುತ್ತದೆ ಎಂದರೆ ಸರಿ ಅಲ್ಲ. ಸೋಮಲಾಪೂರ ಪಂಚಾಯತಿಯವರು ಬೂದಿವಾಳ ಗ್ರಾಮದ ದಾವಾ ಆಸ್ತಿಯ ರಸ್ತೆಯಲ್ಲಿ ಸಾರ್ವಜನಿಕರ ಬಳಕೆಗಾಗಿ ಅಂತರ್ಜಲಕ್ಕಾಗಿ ನಳಗಳನ್ನು ಹಾಕಿರುತ್ತಾರೆ ಎಂದರೆ ಸರಿ ಅಲ್ಲ. ಬೂದಿವಾಳ ಕ್ಯಾಂಪಿಗೂ ಸಿಂಧನೂರು-ಬಳ್ಳಾರಿ ರಸ್ತೆಯ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ವಾಸದ ಮನೆಗಳಿವೆ ಎಂದರೆ ಸರಿ. ಸದರಿ ಎರಡೂ ದಿಕ್ಕಿನಿಂದ ಅಲ್ಲಿಯ ಜನ ಮುಖ್ಯ ರಸ್ತೆಯಿಂದ ತಮ್ಮ ಮನೆಯವರೆಗೆ ರಸ್ತೆಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಸಹೋದರ ಶ್ರೀನಿವಾಸರವರು ಸಿಂಧನೂರು-ಬಳ್ಳಾರಿ ರಸ್ತೆಯಿಂದ ಸರ್ವೇ ನಂ.60 ಮತ್ತು 61 ರ ಮುಖಾಂತರ ಪೂರ್ವಕ್ಕೆ ಕೆನಾಲಗೆ ಹೋಗಲು ಇರುವ ರಸ್ತೆಯ ಪಶ್ಚಿಮಕ್ಕೆ ಇರುವ ರಸ್ತೆ ಹಾಗೂ ಅದರ ಉತ್ತರಕ್ಕೆ ಇರುವ ರಸ್ತೆಯ ಮುಖಾಂತರ ತನ್ನ ಮನೆಗೆ ಹೋಗುತ್ತಾನೆ. ನನ್ನ ಹಾಗೂ ಸಹೋದರರ ನಡುವೆ ಪಾಲು ವಿಭಾಗವು ನೋಂದಣಿ ಆಗಿರುವುದಿಲ್ಲ. ಸದರಿ ಪಾಲು ವಿಭಾಗದ ಬಗ್ಗೆ ಲಿಖಿತ ದಾಖಲಿ ಇರುವುದಿಲ್ಲ, ಆದರೆ ಪಂಚಾಯತಿಯ ಮುಖಾಂತರ ಮಾಡಿಕೊಂಡಿರುತ್ತೇವೆ. 2 ನೇ ಪ್ರತಿವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ಆತನಿಗೆ ಸಂಬಂಧಿಸಿ 2 ಗುಂಟೆ ಜಾಗೆ ಇತ್ತು ಎಂದರೆ ಸರಿ ಅಲ್ಲ. ಸದರಿ ಜಾಗೆಯನ್ನು 2 ನೇ ಪ್ರತಿವಾದಿ 1 ನೇ ವಾದಿಯಿಂದ ಖರೀದಿಸಿರುತ್ತಾರೆ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿಯ ಭಾಗಕ್ಕೆ ಬಂದ ಜಮೀನಿಂದ 130 ಫಿಟ್ ಅಂತರದಲ್ಲಿ ಸಿಂಧನೂರು-ಸಿರಗುಪ್ಪ ಮುಖ್ಯ ರಸ್ತೆ ಇದೆ. ಸದರಿಯವರಿಗೆ ರಸ್ತೆಯ ಹಕ್ಕನ್ನು ಪಾಲು ವಿಭಾಗದ ಸಮಯಕ್ಕೆ ಯಾಕೆ ನೀಡಿಲ್ಲ ಎಂದರೆ, ಸಾಕ್ಷಿಯು

ನನ್ನ ತಂದೆ ಪಾಲು ವಿಭಾಗ ಮಾಡಿದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮನೆಯಿಂದ ಕಾಲುವೆಗೆ 12 ಫಿಟ್ ಅಗಲದ ರಸ್ತೆ ಇದೆ ಎಂದರೆ, ಸಾಕ್ಷಿಯು ಸದರಿಯವರ ಮನೆಯ ದಕ್ಷಿಣ ದಿಕ್ಕಿಗೆ ಸದರಿ ರಸ್ತೆ ಕೊನೆಗೊಳ್ಳುತ್ತದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮನೆ ಪೂರ್ವ ಹಾಗೂ ಉತ್ತರಾಭಿಮುಖವಾಗಿ ಇರುತ್ತದೆ. 2 ನೇ ಪ್ರತಿವಾದಿಯ ಮನೆಯಿಂದ 60 ಫಿಟ್ ಅಂತರದಲ್ಲಿ ಕಾಲುವೆಯ ರಸ್ತೆ ಬರುತ್ತದೆ. ಸದರಿ ರಸ್ತೆಯಿಂದ ಸಿಂಧನೂರು-ಸಿರಗುಪ್ಪ ಮುಖ್ಯ ರಸ್ತೆ 100-120 ಫಿಟ್ ಅಂತರದಲ್ಲಿದೆ. ಸದರಿ ರಸ್ತೆ ಮುಖಾಂತರ ಬಂದರೆ 2 ನೇ ಪ್ರತಿವಾದಿಯ ಮನೆ ಮುಖ್ಯ ರಸ್ತೆಯಿಂದ 1 ರಿಂದ 1 ½ ಕಿಮಿ ದೂರ ಆಗುತ್ತದೆ ಎಂದರೆ ಸರಿ ಅಲ್ಲ. ವಾದಿ ನಮ್ಮ ಜಾಗೆಯಲ್ಲಿ ಬಂದು ತೊಂದರೆ ಉಂಟು ಮಾಡಿದ್ದರಿಂದ ನಮ್ಮಗಳ ನಡುವೆ ವೈಮನಸ್ಸು ಇದೆ. ಅದಕ್ಕೂ ಮುಂಚೆ ನಮ್ಮಗಳ ನಡುವೆ ವೈಮನಸ್ಸು ಇತ್ತಾ ಎಂದರೆ, ಸಾಕ್ಷಿಯು ನಮ್ಮಗಳ ನಡುವೆ ಆಗ ಸಂಪರ್ಕ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿ ತನ್ನ ಮನೆಗೆ ಹೋಗುವ ರಸ್ತೆಯಲ್ಲಿ ನಾನು ಅತೀಕ್ರಮಣ ಮಾಡಿದ್ದರಿಂದ ಆತ ಈ ದಾವೆ ಸಲ್ಲಿಸಿರುತ್ತಾನೆ ಎಂದರೆ ಸರಿ ಅಲ್ಲ

2 ನೇ ಪ್ರತಿವಾದಿ ಮನೆ ಸಲುವಾಗಿ ಮೂಲ ದಾವಾ ಸಂಖ್ಯೆ353/2015 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ನನ್ನ ಸಹೋದರನ ಪರವಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ತೀರ್ಪಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನೇ ನನ್ನ ಸಹೋದರನ ಮುಖಾಂತರ ಸದರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.